# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 227 | Pages. 2 | Date: 19-08-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 227 - ಪುಟಗಳು : 2 | 19-08-2026 | ಬುಧವಾರ | Ph: 8762954248 | ದರ : ₹1


# ಗಾಢ ನಿದ್ರೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ

## ಬರ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲ । ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಮಳೆ ವೈಫಲ್ಯ, ಬೆಳೆನಾಶ ಹೆಚ್ಚಾಗಿದ್ದರೂ ಅನ್ನದಾತರ ನೆರವಿಗೆ ಬರಬೇಕಿದ್ದ ರಾಜ್ಯ ಸರ್ಕಾರ ಗಾಢ ನಿದ್ರೆಯಲ್ಲಿ ಮುಳುಗಿದೆ. ಉಸ್ತುವಾರಿ ಸಚಿವರ ಎರಡು ದಿನಗಳ ಪ್ರವಾಸದಿಂದ ಯಾವ ಲಾಭವಿಲ್ಲ ಎಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಜಿಲ್ಲೆಯನ್ನು ಬರಪೀಡಿತ ಪಟ್ಟಿಗೆ ಸೇರಿಸಬೇಕು. ಈ ಬಗ್ಗೆ ಆಗ್ರಹಿಸುತ್ತಿದ್ದರೂ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಈ ಬಾರಿ ಪಶ್ಚಿಮ ಘಟ್ಟಗಳಲ್ಲೂ ಬರ ಆವರಿಸಿದೆ. ಏಪ್ರಿಲ್, ಮೇ, ಜೂನ್‌ನಲ್ಲಿ ಮಳೆಯೇ ಬಂದಿಲ್ಲ. ಶೇ.60 ರಷ್ಟು ಮಳೆ ಕೊರತೆ ಆಗಿದೆ ಎಂದು ಸರ್ಕಾರವೇ ಹೇಳಿದೆ. ಇದರಿಂದ ಬೆಳೆಯೂ ಕೈಕೊಟ್ಟಿದೆ ಎಂದರು.

ಇಷ್ಟಾದರೂ ಇನ್ನೂ ಬರ ಅಧ್ಯಯನ ಮುಗಿದಿಲ್ಲ, ಜೂ.3 ಸಿಎಂ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಎರಡು ತಿಂಗಳವರೆಗೆ ಸಂಪುಟ ವಿಸ್ತರಣೆ ಕಸರತ್ತು ನಡೆಯಿತು. ನಂತರ ಖಾತೆಗಾಗಿ ಕ್ಯಾತೆ ನಡೆಯಿತು. ಈವರೆಗೂ ಕೇಂದ್ರ ಸರ್ಕಾರಕ್ಕೆ ವರದಿ ಕೊಟ್ಟಿಲ್ಲ ಏಕೆ ಎಂದು ಪ್ರಶ್ನಿಸಿದರು.

ಶಿವಲಿಂಗೇಗೌಡರು ಸಚಿವರಾಗಿರುವುದನ್ನು ನಾವು ಸ್ವಾಗತಿಸುತ್ತೇವೆ. ಅವರೂ ರೈತರ ಬಗ್ಗೆ ಹೆಚ್ಚಾಗಿ ಮಾತನಾಡುತ್ತಾರೆ. ಅವರೂ ಜಿಲ್ಲೆಯಿಂದ ವರದಿ ಕಳಿಸಿಲ್ಲ ಎಂದು ದೂರಿದರು.

ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ, ಮುಕ್ಕಾಲು ಭಾಗ ಹೇಮಾವತಿ ಅಣೆಕಟ್ಟೆ ಭರ್ತಿಯಾಗಿದ್ದರೂ, ಕೃಷಿಗೆ ನೀರು ಕೊಡುತ್ತಿಲ್ಲ. ನಿನ್ನೆ-ಮೊನ್ನೆಯಿಂದ ನಾಲೆಗಳಿಗೆ ನೀರು ಬಿಡಲಾಗಿದೆ. ಜಾನುವಾರುಗಳಿಗೆ ಮೇವಿಲ್ಲ, ಕುಡಿಯಲು ನೀರಿಲ್ಲ, ಶೇ.75ಕ್ಕೂ ಅಧಿಕ ಮೆಕ್ಕೆಜೋಳ ಬಿಳಿಸುಳಿಯಿಂದ ಹಾಳಾಗಿದೆ ಎಂದು ದೂರಿದ ಅವರು, ರಾಜ್ಯ ಸರ್ಕಾರ ಬರ ನಿರ್ವಹಣೆ ಮಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಆಪಾದಿಸಿದರು.

ಡಿಸಿ ಅಕೌಂಟ್‌ನಲ್ಲಿ ಹಣ ಇದೆ ಅಂದಾಕ್ಷಣ ಎಲ್ಲವೂ ಆಗಲ್ಲ. ಸರ್ಕಾರ ತಕ್ಷಣ ಕಾರ್ಯಪ್ರವೃತ್ತರಾಗಬೇಕು. ಇಲ್ಲದಿದ್ದರೆ ಪ್ರತಿಭಟನೆ ಮಾಡುವ ಎಚ್ಚರಿಕೆ ನೀಡಿದರು.

ಇದೇ ವೇಳೆ ಹನೂರು ಎನ್‌ಕೌಂಟರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದ ಅವರು, ತಮಿಳರನ್ನು ಶೂಟೌಟ್ ಮಾಡಿ ಕೊಲ್ಲಲಾಗಿದೆ ಎಂದು ತಮಿಳುನಾಡು ಸಿಎಂ ವಿಜಯ್ ಆರೋಪವನ್ನು ಖಂಡಿಸಿದರು.

ವಾಲ್ಮೀಕಿ ನಿಗಮದ ಹಗರಣದಿಂದ ಇನ್ನೂ ಕ್ಲೀನ್ ಚಿಟ್ ಪಡೆಯದಿದ್ದರೂ ಮತ್ತೆ ಮಂತ್ರಿಯಾಗಿರುವ ನಾಗೇಂದ್ರ ಅವರು ನೈತಿಕ ಹೊಣೆ ಹೊತ್ತು ಕೂಡಲೇ ರಾಜೀನಾಮೆ ನೀಡಬೇಕು. ಇದೇ ಕಾರಣಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ಪಡೆದಿದ್ದರು, ಆದರೆ ಬಂಡೆ ಖ್ಯಾತಿಯ ಸಿಎಂ ಡಿಕೆಶಿ ಅದೇಕೋ ಹೆದರುತ್ತಿದ್ದಾರೆ ಎಂದು ಟೀಕಿಸಿದರು.

### ಪ್ರಜಾ ಸೇವೆ ಇಲಾಖೆ ಏಕೆ?

ಹೋಬಳಿ ಮಟ್ಟದಲ್ಲೂ ಜನಸ್ಪಂದನಾ ಸಭೆ ನಡೆಸಬೇಕು ಎಂದಿರುವ ಸಿಎಂ ಅವರು, ಪ್ರಜಾ ಸೇವಾ ಇಲಾಖೆ ಏಕೆ ಮಾಡಿದರು ಎಂದು ಪ್ರಶ್ನಿಸಿದ ಮಾಜಿ ಸಚಿವರು, ಹಿರಿಯ ನಾಯಕ ದೇಶಪಾಂಡೆ ಅವರಿಗೆ ಹುದ್ದೆ ಕೊಡಲೆಂದೇ ಆಡಳಿತ ಸುಧಾರಣೆ ಆಯೋಗ ಸೃಷ್ಟಿ ಮಾಡಿದ್ದಾರೆ ಎಂದು ದೂರಿದರು. ಈ ವಿಚಾರದಲ್ಲಿ ರಾಮಸ್ವಾಮಿ ಅವರ ವರದಿ ಮಾಡಿ ಎಂದು ಒತ್ತಾಯಿಸಿದರು.

ಕೆಪಿಎಸ್ಸಿ ಹಗರಣದ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದ ಕುಮಾರಸ್ವಾಮಿ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಡಿರುವ ಅವಮಾನ ಖಂಡಿಸಿದರು.

ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸೂಕ್ತ ತನಿಖೆ ನಡೆಸಿ ಅಸಮಾನತೆ, ಜಾತೀಯತೆ ಪ್ರೋತ್ಸಾಹಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮಲೆನಾಡಿಗೆ ಧಕ್ಕೆ ಆಗುವ ಕಸ್ತೂರಿ ರಂಗನ್ ವರದಿಯನ್ನು ಯಾವುದೇ ಕಾರಣಕ್ಕೂ ಜಾರಿ ಮಾಡಬಾರದು, ಇಲ್ಲದಿದ್ದರೆ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು.

ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ, ಮುಖಂಡರಾದ ಸತೀಶ್, ರಂಗಸ್ವಾಮಿ, ಸಮೀರ್ ಇದ್ದರು.

# ಶುಂಠಿ ನಷ್ಟ ಪರಿಹಾರಕ್ಕೆ ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಲೂರು ತಾಲೂಕು ಕಬ್ಬಿನಮನೆ ಗ್ರಾಮದ ಮಹೇಶ್ ಎಂಬುವರು ಕಳಪೆ ಕಳೆನಾಶಕ ಪೂರೈಕೆಯಿಂದ ಲಕ್ಷಾಂತರ ರೂ. ಮೌಲ್ಯದ ಶುಂಠಿ ಬೆಳೆ ಕಳೆದುಕೊಂಡಿದ್ದರೂ, ಈ ವರೆಗೂ ಯಾರಿಂದಲೂ ಸ್ಪಂದನೆ ಸಿಕ್ಕಿಲ್ಲ ಎಂದು ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಈ ಬಗ್ಗೆ ಪ್ರಶ್ನೆ ಮಾಡಿದರೆ ಕಳೆನಾಶಕ ನೀಡಿದ ಅಂಗಡಿ ಮಾಲೀಕ ರಘು ಉಡಾಫೆ ಉತ್ತರ ನೀಡುತ್ತಿದ್ದಾರೆ. ಮಹೇಶ್ ಹಣ ನೀಡಿಲ್ಲ ಎಂದು ರಘು ನೀಡಿದ ದೂರು ಆಧರಿಸಿ ಬೇಲೂರು ಠಾಣೆ ಇನ್ಸ್‌ಪೆಕ್ಟರ್ ರೇವಣ್ಣ ಅವರು ಬಡ ರೈತನನ್ನು ಕರೆದು ವಿಚಾರಣೆ ಮಾಡಿದ್ದಾರೆ. ಆದರೆ ಅದೇ ರಘು ನೀಡಿದ ದೂರಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ಈ ವಿಚಾರದಲ್ಲಿ ಪೊಲೀಸರೂ ನಿರ್ಲಕ್ಷ್ಯದಿಂದ ನಡೆದುಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ತೋಟಗಾರಿಕೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳೂ ಸ್ಥಳಕ್ಕೆ ಬಂದು ಪರಿಶೀಲಿಸಿದರು. ಅದಕ್ಕಾಗಿ ವಿಶೇಷ ತಂಡ ರಚಿಸಿ ತನಿಕೆ ಮಾಡಿಸುವುದಾಗಿ ತಿಳಿಸಿದರು. ಆದರೆ ಈವರೆಗೂ ಯಾವುದೇ ಪ್ರಗತಿ ಆಗಿಲ್ಲ, ಕೇಳಲು ಹೋದರೆ ಒಬ್ಬರ ಮೇಲೆ ಒಬ್ಬರು ಹೇಳಿ ಜವಾಬ್ದಾರಿಯಿಂದ ಜಾರಿಕೊಳ್ಳುತ್ತಿದ್ದಾರೆ ಎಂದು ಆಪಾದಿಸಿದರು.

ಇನ್ನಾದರೂ ಔಷಧಿ ಅಂಗಡಿ ಬಂದ್ ಮಾಡಿ, ಲೈಸೆನ್ಸ್ ರದ್ದು ಮಾಡಬೇಕು. ಮೋಸ ಮಾಡಿರುವವರ ಮೇಲೆ ಕ್ರಮ ಜರುಗಿಸಬೇಕು. ಶುಂಠಿ ನಷ್ಟದಿಂದ ಲಕ್ಷಾಂತರ ರೂ. ಕೈ ಸುಟ್ಟುಕೊಂಡಿರುವ ರೈತ ಮಹೇಶ್‌ಗೆ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಒತ್ತಾಯಿಸಿದರು. ರೈತ ಮಹೇಶ್ ಹಾಗೂ ಬಿಎಸ್‌ಪಿ ಮುಖಂಡರಿದ್ದರು.

# ಸಿಐಟಿಯು ನೇತೃತ್ವದಲ್ಲಿ ಗ್ರಾ.ಪಂ. ನೌಕರರ ಧರಣಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗ್ರಾಮ ಪಂಚಾಯಿತಿ ನೌಕರರಿಗೆ ಪರಿಷ್ಕೃತ ಕನಿಷ್ಟ ವೇತನ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದಿಂದ ಸಿಐಟಿಯು ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, ಗ್ರಾಮ ಪಂಚಾಯಿತಿ ನೌಕರರಿಗೆ ವೈಜ್ಞಾನಿಕ ಕನಿಷ್ಟ ವೇತನ ಜಾರಿಗೊಳಿಸುವಂತೆ 2021-22ನೇ ಸಾಲಿನಿಂದಲೂ ಸರ್ಕಾರಕ್ಕೆ ಮನವಿ ಸಲ್ಲಿಸುವುದರ ಜೊತೆಗೆ ನ್ಯಾಯಾಲಯ ಹಾಗು ಬಹಿರಂಗ ಹೋರಾಟ ನಡೆಸುತ್ತಿದ್ದರೂ ಸರ್ಕಾರಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಆರೋಪಿಸಿದರು.

ಕರ ವಸೂಲಿಗಾರ, ಡಾಟಾ ಎಂಟ್ರಿ ಆಪರೇಟರ್, ನೀರುಗಂಟಿ, ಜವಾನ ಹಾಗೂ ಸ್ವಚ್ಛತಾ ಕೆಲಸಗಾರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಸೇವಾ ಹಿರಿತನ ಪರಿಗಣಿಸಿ ಸಂಬಳ ಹೆಚ್ಚಿಸಬೇಕು. ಗ್ರಾಮ ಪಂಚಾಯಿತಿ ನೌಕರರು ನಿವೃತ್ತಿ ಅಥವಾ ಅಕಾಲಿಕ ಮರಣ ಹೊಂದಿದರೆ 6 ಲ.ರೂ. ಇಡುಗಂಟು ನೀಡಬೇಕು. ಪ್ರತಿ ಪಂಚಾಯಿತಿಗೆ ಲೆಕ್ಕ ಸಹಾಯಕ ಹುದ್ದೆ ಸೃಷ್ಟಿಸಬೇಕು ಎಂದು ಆಗ್ರಹಿಸಿದರು.

2022ರ ಜು. 28 ರಂದು ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಅನುಸೂಚಿತ ಉದ್ದಿಮೆಗೆ ಕನಿಷ್ಟ ವೇತನ ಪರಿಷ್ಕರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು.

ಈ ಸಂಬಂಧ ಹೈಕೋರ್ಟ್‌ನಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ನಂತರ ಸುಪ್ರೀಂ ಕೋರ್ಟ್‌ನ ರೆಪ್ತಕೋಸ್ ಬ್ರೆಟ್ ಪ್ರಕರಣದ ಮಾರ್ಗಸೂಚಿ ಅನುಸರಿಸಿ ಹೊಸ ಅಧಿಸೂಚನೆ ಹೊರಡಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಲಾಗಿತ್ತು. ನ್ಯಾಯಾಲಯದ ನಿರ್ದೇಶನದಂತೆ 2025ರ ಏ.11 ರಂದು ಕರಡು ಅಧಿಸೂಚನೆ ಪ್ರಕಟಿಸಿತ್ತು. ಸಂಘದ ಆಕ್ಷೇಪಣೆ ಹಾಗೂ ಕನಿಷ್ಟ ವೇತನ ಸಲಹಾ ಮಂಡಳಿ ಚರ್ಚೆಗಳ ಬಳಿಕ ಮುಖ್ಯಮಂತ್ರಿ ಅವರ ಅನುಮೋದನೆಯೊಂದಿಗೆ ಕಾರ್ಮಿಕ ಇಲಾಖೆ 2026ರ ಮೇ 22 ರಂದು ಪರಿಷ್ಕೃತ ಕನಿಷ್ಟ ವೇತನ ಜಾರಿಗೊಳಿಸಿ ಅಂತಿಮ ಆದೇಶ ಹೊರಡಿಸಿದೆ.

ಈ ಆದೇಶ ಜಾರಿಗೆ ಅಡ್ಡಿಪಡಿಸುವ ಪ್ರಯತ್ನ ನಡೆದಿದ್ದರಿಂದ ಸಂಘದ ವತಿಯಿಂದ ಮೇ 25ರಂದು ರಾಜ್ಯದ ಮೂರು ಹೈಕೋರ್ಟ್ ಪೀಠಗಳಲ್ಲಿ ಕೇವಿಯೆಟ್ ದಾಖಲಿಸಲಾಗಿದೆ. ಪ್ರಕರಣ ವಿಚಾರಣೆಯಲ್ಲಿದ್ದರೂ ಮೇ 22 ರಂದು ಹೊರಡಿಸಿರುವ ಕನಿಷ್ಟ ವೇತನದ ಅಧಿಸೂಚನೆ ಜಾರಿಯಲ್ಲಿದೆ.

ಆದರೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪರಿಷ್ಕೃತ ವೇತನ ಪಾವತಿಗೆ ಅಗತ್ಯ ಅನುದಾನ ಬಿಡುಗಡೆ ಮಾಡುತ್ತಿಲ್ಲವೆಂದು ಆರೋಪಿಸಿದರು.

ಪರಿಷ್ಕೃತ ಕನಿಷ್ಟ ವೇತನದ ಆದೇಶವನ್ನು ಕೂಡಲೇ ಜಾರಿಗೊಳಿಸಿ ನೌಕರರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಟಿ.ಹೊನ್ನೇಗೌಡ, ಲಕ್ಷ್ಮಣ್, ಅಶೋಕ್, ಚಂದ್ರೇಗೌಡ, ಹೆಚ್.ಆರ್.ನವೀನ್‌ಕುಮಾರ್, ಅರವಿಂದ್ ಮತ್ತಿತರರಿದ್ದರು.

# ಬೆಟ್ಟದ ಭೈರವೇಶ್ವರ ದೇವಸ್ಥಾನದಲ್ಲಿ ಪ್ರವಾಸಿಗರ ಗಲಾಟೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಪ್ರಸಿದ್ಧ ಬೆಟ್ಟದ ಭೈರವೇಶ್ವರ ದೇವಸ್ಥಾನದಲ್ಲಿ ಬೆಂಗಳೂರಿನಿಂದ ಬಂದಿದ್ದರೆನ್ನಲಾದ 60ಕ್ಕೂ ಅಧಿಕ ಪ್ರವಾಸಿಗರು ಕುಡಿದ ಮತ್ತಿನಲ್ಲಿ ಗಲಾಟೆ ನಡೆಸಿ ದೇವಸ್ಥಾನದ ಗೇಟ್ ತೆರೆಯುವಂತೆ ಒತ್ತಾಯಿಸಿದ ಘಟನೆ ನಡೆದಿದೆ.

ಸೋಮವಾರ ಬೆಳಿಗ್ಗೆ 11ರ ಸುಮಾರಿಗೆ ದೇವಸ್ಥಾನದ ಪ್ರವೇಶ ದ್ವಾರ ತೆರೆಯುವಂತೆ ಭದ್ರತಾ ಸಿಬ್ಬಂದಿಯೊಂದಿಗೆ ಪ್ರವಾಸಿಗರು ವಾಗ್ವಾದ ನಡೆಸಿದ್ದಾರೆ ಎನ್ನಲಾಗಿದೆ. ಪರಿಸ್ಥಿತಿ ನಿಯಂತ್ರಿಸಲು ಮುಂದಾದ ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಯೊಂದಿಗೂ ಪ್ರವಾಸಿಗರು ಗಲಾಟೆಗೆ ಮುಂದಾದರು ಎಂದು ತಿಳಿದುಬಂದಿದೆ. ಬಳಿಕ ಪೊಲೀಸರು ಮಧ್ಯಪ್ರವೇಶಿಸಿ ಪ್ರವಾಸಿಗರನ್ನು ಸ್ಥಳದಿಂದ ಹೊರಗೆ ಕಳುಹಿಸುವ ಮೂಲಕ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ದೇವಸ್ಥಾನದ ಪಾವಿತ್ರ್ಯ ಹಾಗೂ ಪ್ರವಾಸಿಗರ ವರ್ತನೆಗೆ ಸಂಬಂಧಿಸಿದಂತೆ ಈ ಹಿಂದೆಯೂ ಸ್ಥಳೀಯರು ಹಾಗೂ ಪ್ರವಾಸಿಗರ ನಡುವೆ ಹಲವು ಬಾರಿ ವಿವಾದಗಳು ಉಂಟಾಗಿ, ಪೊಲೀಸ್ ಠಾಣೆಯ ಮೆಟ್ಟಿಲೇರುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೀಗ ಮತ್ತೆ ಇಂತಹ ಘಟನೆ ನಡೆದಿರುವುದರಿಂದ ದೇವಸ್ಥಾನದ ಭದ್ರತೆ ಕುರಿತು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ದೇವಸ್ಥಾನದ ಪಾವಿತ್ರ್ಯ, ಶಾಂತಿ ಹಾಗೂ ಭದ್ರತೆ ಕಾಪಾಡುವ ನಿಟ್ಟಿನಲ್ಲಿ ಹೆಚ್ಚಿನ ಪೊಲೀಸ್ ಹಾಗೂ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು. ಮದ್ಯಪಾನ ಮಾಡಿ ದೇವಸ್ಥಾನಕ್ಕೆ ಬರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

### ಕಾಮಗಾರಿ ಪೂರ್ಣಗೊಳಿಸಲು ಒತ್ತಾಯ

ದೇವಸ್ಥಾನ ಕಮಿಟಿ ಅಧ್ಯಕ್ಷ ಬೈರಮುಡಿ ಸುಬ್ರಾಯ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳ ಕುರಿತು ಚರ್ಚಿಸಲಾಯಿತು. ಉಪಾಧ್ಯಕ್ಷ ಯೋಗೇಂದ್ರ ನೆಲೆಗಳ್ಳಿ ಹಾಗೂ ಕರವೇ ಕಾರ್ಮಿಕ ಘಟಕದ ಅಧ್ಯಕ್ಷ ಸಂಗ್ರಾಮ್ ಹೊಡಚಳ್ಳಿ ಮಾತನಾಡಿ, ಶಾಸಕರ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಯಾವುದೇ ಕಾರಣಕ್ಕೂ ಅಡ್ಡಿಯಾಗದಂತೆ ಶೀಘ್ರ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

### ಆ.23ರ ವರೆಗೆ ಪ್ರವಾಸಿಗರಿಗೆ ನಿರ್ಬಂಧ

ಆ.23ರಂದು ಎಂಟು ಗ್ರಾಮಗಳ ಗ್ರಾಮಸ್ಥರಿಂದ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಲಿರುವ ಹಿನ್ನೆಲೆಯಲ್ಲಿ, ಅಂದಿನವರೆಗೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಶಾಂತಿಯುತವಾಗಿ ನಡೆಯಲು ಅಗತ್ಯ ಭದ್ರತಾ ವ್ಯವಸ್ಥೆ ಕಲ್ಪಿಸುವುದರ ಜತೆಗೆ ದೇವಸ್ಥಾನದ ಪಾವಿತ್ರ್ಯಕ್ಕೆ ಧಕ್ಕೆ ಉಂಟುಮಾಡುವವರ ವಿರುದ್ಧ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

# ಆ. 24-25 ರಂದು ಉಚಿತ ಉದ್ಯೋಗ ಮೇಳ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಆ. 24-25 ರಂದು ಉಚಿತ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿಯ ಫಾದರ್ ಎಸ್.ಜೆ.ಆಲ್ವಿನ್ ವೇಗಸ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 20ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳಿಂದ ಉದ್ಯೋಗ ಸಂದರ್ಶನ ನಡೆಯಲಿದ್ದು, ಪದವೀಧರರಿಗೆ ಸುವರ್ಣಾವಕಾಶ ಕಲ್ಪಿಸಲಾಗಿದೆ. ಕಳೆದ ಬಾರಿ 192 ಅಭ್ಯರ್ಥಿಗಳು ಭಾಗಿಯಾಗಿದ್ದರು. 121 ಮಂದಿ ಉದ್ಯೋಗದ ಆಫರ್ ಪಡೆದಿದ್ದರು ಎಂದರು.

ಈ ಬಾರಿಯೂ ನಮ್ಮ ಕಾಲೇಜಿನ ವತಿಯಿಂದ ಯುವ ಜನರ ಸಬಲೀಕರಣ, ಉದ್ಯೋಗಾವಕಾಶಗಳ ಸೃಷ್ಟಿ ಹಾಗೂ ಸಮಾಜ ಮುಖಿ ಸೇವೆ ಉದ್ದೇಶದಿಂದ ಕಾಲೇಜಿನ ಆವರಣದಲ್ಲಿ ಈ ಮೇಳ ಆಯೋಜಿಸಲಾಗಿದೆ ಎಂದರು.

ಪ್ರದೀಪ್ ಕುಮಾರ್ ಮಾತನಾಡಿ, ವಿವಿಧ ವಿದ್ಯಾರ್ಹತೆ ಹೊಂದಿರುವ ಪದವೀಧರರು ಹಾಗೂ ಸ್ನಾತಕೋತ್ತರ ಪದವೀಧರರಿಗೆ ಉದ್ಯೋಗದ ಸಂದರ್ಶನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಇಂದಿನ ಕಾಲಘಟ್ಟದಲ್ಲಿ ಉದ್ಯೋಗ ಪಡೆಯುವುದು ತುಂಬಾ ಕಷ್ಟ. ಉದ್ಯೋಗ ಮೇಳಕ್ಕೂ ಮುನ್ನ ಉತ್ತಮ ರೆಸ್ಯೂಮ್ ತಯಾರಿಕೆ, ಸಂದರ್ಶನ ಕೌಶಲ್ಯ, ಸಂವಹನ ಕೌಶಲ್ಯ ಮತ್ತು ಸಾಫ್ಟ್ ಸ್ಕಿಲ್ಸ್ ಬಗ್ಗೆ ಆ.24 ರಂದು ಉದ್ಯೋಗ ಪೂರ್ವ ತರಬೇತಿಯನ್ನೂ ಹಮ್ಮಿಕೊಳ್ಳಲಾಗಿದೆ, ಇದೆಲ್ಲವೂ ಉಚಿತವಾಗಿ ನಡೆಯಲಿದೆ ಎಂದರು.

ರಂಗೇಗೌಡ ಮಾತನಾಡಿ, ಮೈಸೂರು, ಬೆಂಗಳೂರು ಮೊದಲಾದ ಕಡೆಗಳಿಂದ ವಿವಿಧ ಕಂಪನಿಗಳು ಆಗಮಿಸಿ ಅಭ್ಯರ್ಥಿಗಳು ನೇರ ಸಂದರ್ಶನ ನಡೆಸಲಿದ್ದಾರೆ. ಬಿಬಿಎ, ಬಿ.ಕಾಂ, ಬಿಸಿಎ, ಬಿಎ, ಬಿಎಸ್‌ಸಿ, ಬಿಇ, ಬಿಟೆಕ್, ಎಂಎ, ಎಂಬಿಎಂ, ಎಂ.ಕಾಂ, ಎಂಸಿಎ ಹಾಗೂ ಎಂಟೆಕ್ ಸೇರಿದಂತೆ ಸಮಾನ ವಿದ್ಯಾರ್ಹತೆ ಹೊಂದಿರುವವರು ಮೇಳದಲ್ಲಿ ಭಾಗಿಯಾಗಲು ಅರ್ಹರು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಂಥಾಲಯ ವಿಭಾಗದ ಶಶಿಕಲಾ, ಕಂಪನಿಯ ಬಸಪ್ಪ, ನಿಖಿಲ್ ತೇಜಸ್ ಇದ್ದರು.

# ದೇವರಾಜ ಅರಸು ಜನ್ಮ ದಿನ: ಪೂರ್ವಭಾವಿ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ಮಾಜಿ ಮುಖ್ಯಮಂತ್ರಿ ಡಿ. ದೇವರಾಜು ಅರಸು ಅವರ 111ನೇ ಜನ್ಮ ದಿನಾಚರಣೆಯನ್ನು ಪಟ್ಟಣದ ಮಿನಿ ವಿದಾನಸೌಧ ಆವರಣದಲ್ಲಿ ನಡೆಸಲು ತೀರ್ಮಾನಿಸಲಾಯಿತು.

ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಅಧ್ಯಕ್ಷ, ತಹಸೀಲ್ದಾರ್ ಹೆಚ್. ಮಲ್ಲಿಕಾರ್ಜುನ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ತಹಸೀಲ್ದಾರ್ ಮಾತನಾಡಿ, ರಾಜ್ಯದ ಮಾಜಿ ಮುಖ್ಯ ಮಂತ್ರಿ, ಸಾಮಾಜಿಕ ನ್ಯಾಯದ ಹರಿಕಾರರು, ದೀನ ದಲಿತರು ಮತ್ತು ಹಿಂದುಳಿದ ವರ್ಗಗಳ ಆಶಾಕಿರಣವಾಗಿದ್ದ ಡಿ. ದೇವರಾಜು ಅರಸು ಅವರ 111ನೇ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದರು.

ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ಅರಸುರವರ ಅಭಿಮಾನಿಗಳು ಆಗಮಿಸುವಂತೆ ಮಾಹಿತಿ ಮತ್ತು ಪ್ರಚಾರವನ್ನು ಕರಪತ್ರಗಳ ಮೂಲಕ, ಮಾಧ್ಯಮಗಳ ಮೂಲಕ, ಪಟ್ಟಣದಲ್ಲಿ ಅರಸುರವರ ಭಾವಚಿತ್ರವಿರುವ ಫ್ಲೆಕ್ಸ್ ಅಳವಡಿಕೆ ಮಾಡಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಚಂದ್ರಶೇಖರ್ ಅವರಿಗೆ ಸೂಚಿಸಿದರು.

ಹಿಂದುಳಿದ ವರ್ಗಗಳ ಮುಖಂಡ ಬಿ.ಸಿ. ಶಂಕರಾಚಾರ್ ಮಾತನಾಡಿ, ತಾಲೂಕಿನ ಹಿಂದುಳಿದ ವರ್ಗಗಳ, ಸಮುದಾಯಗಳ, ಪ್ರಗತಿಪರ ಚಿಂತನಾಕಾರರು, ಸಾರ್ವಜನಿಕರ ಬಹುದಿನದ ಬೇಡಿಕೆಯಾದ ಡಿ. ದೇವರಾಜು ಅರಸು ಭವನ ನಿರ್ಮಾಣ ಮಾಡುವ ಸಂಬಂಧ ನಿವೇಶನದ ಅವಶ್ಯಕತೆ ಇದೆ. ಪಟ್ಟಣದ ಹೃದಯ ಭಾಗದಿಂದ ಒಂದು ಕಿ.ಮೀ. ವ್ಯಾಪ್ತಿಯೊಳಗೆ ನಿವೇಶನ ಗುರುತಿಸಿ ಮಂಜೂರು ಮಾಡಬೇಕಾಗಿ ತಹಸೀಲ್ದಾರ್ ಅವರಿಗೆ ಮನವಿ ಮಾಡಿದರು.

ಸಭೆಯಲ್ಲಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್ , ಸಿ.ಡಿ.ಪಿ.ಓ ದಿನೇಶ್, ಬಿ.ಸಿ.ಎಂ ಅಧಿಕಾರಿ ಚಂದ್ರಶೇಖರ್, ಟಿ.ಹೆಚ್.ಓ ಡಾ. ಸ್ನೇಹಾ, ಬಿ.ಸಿ ಶಂಕರಾಚಾರ್, ಕೆ.ಬಿ ಗುರುಮೂರ್ತಿ, ಅರಸಪ್ಪ, ವಿವಿಧ ಇಲಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಖರ್ಗೆ ಅವರಿಗೆ ಅವಮಾನ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

## ಸಂಸದ ಶ್ರೇಯಸ್ ಎಂ. ಪಟೇಲ್ ನೇತೃತ್ವದಲ್ಲಿ ಮೆರವಣಿಗೆ; ಜಿಲ್ಲಾಧಿಕಾರಿಗೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಉತ್ತರಾಖಂಡದ ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಬಳಿಕ ಮೈದಾನವನ್ನು ಶುದ್ಧೀಕರಿಸಿದ ಘಟನೆ ಖಂಡಿಸಿ ಹಾಸನ ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಸಂಸದ ಶ್ರೇಯಸ್ ಎಂ. ಪಟೇಲ್ ನೇತೃತ್ವದಲ್ಲಿ ನಗರದ ಕಾಂಗ್ರೆಸ್ ಜಿಲ್ಲಾ ಕಚೇರಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಬಿ.ಎಂ. ರಸ್ತೆಯ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ತಲುಪಿತು. ಅಲ್ಲಿ ಪ್ರತಿಭಟನಾಕಾರರು ಕೆಲಕಾಲ ಧರಣಿ ನಡೆಸಿ ಘಟನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬಸ್ ಸಂಚಾರಕ್ಕೆ ಸಂಬಂಧಿಸಿದಂತೆ ಪ್ರತಿಭಟನಾಕಾರರು ಹಾಗೂ ಬಸ್ ನಿರ್ವಾಹಕರ ನಡುವೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದ್ದು, ಆಕ್ರೋಶಗೊಂಡ ಕಾರ್ಯಕರ್ತರು ಬಸ್ಸನ್ನು ಹಿಂಬಾಲಿಸಿ ಅಡ್ಡಗಟ್ಟಿ ಕೆಲಕಾಲ ಸಂಚಾರಕ್ಕೆ ತಡೆಯೊಡ್ಡಿದರು.

ಕೆಲವರು ರಸ್ತೆಯಲ್ಲೇ ಮಲಗಿ ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ಆಗಮಿಸಿದ ಪೊಲೀಸರು ಪ್ರತಿಭಟನಾಕಾರರನ್ನು ಮನವೊಲಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ನಂತರ ಕಾಂಗ್ರೆಸ್ ಕಾರ್ಯಕರ್ತರು ಮೆರವಣಿಗೆಯ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಹಿರಿಯ ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಬಳಿಕ ಅದೇ ಮೈದಾನವನ್ನು ಶುದ್ಧೀಕರಿಸಿರುವುದು ಅಮಾನವೀಯ ಹಾಗೂ ಖಂಡನೀಯ ಕೃತ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದು ಖರ್ಗೆ ಅವರಿಗೆ ಮಾತ್ರವಲ್ಲದೆ ದೇಶದ ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರಿಗೆ ಮಾಡಿದ ಅವಮಾನವಾಗಿದೆ. ಘಟನೆಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಂಡು, ಖರ್ಗೆ ಅವರಲ್ಲಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಇ.ಎಚ್. ಲಕ್ಷ್ಮಣ್, ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಮುಖಂಡರಾದ ತಾರಾಚಂದನ್, ರಘು ದಾಸರಕೊಪ್ಪಲು, ಮಲ್ಲಿಗೆವಾಳ್ ದ್ಯಾವಪ್ಪ, ಚಂದ್ರಶೇಖರ್, ದೇವರಾಜು, ರಾಮಚಂದ್ರ, ಪ್ರಕಾಶ್, ಲಕ್ಷ್ಮಣ್, ಜಯರಾಮ್ ಸೇರಿದಂತೆ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.



### ಬಸ್ ಅಡ್ಡಗಟ್ಟಿ ಪ್ರತಿಭಟನೆ; ಪೊಲೀಸರಿಂದ ಪರಿಸ್ಥಿತಿ ನಿಯಂತ್ರಣ

ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಯುತ್ತಿದ್ದ ವೇಳೆ ಬಸ್ ನಿರ್ವಾಹಕರೊಂದಿಗೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದ್ದು, ಆಕ್ರೋಶಗೊಂಡ ಕಾರ್ಯಕರ್ತರು ಬಸ್ಸನ್ನು ಹಿಂಬಾಲಿಸಿ ಅಡ್ಡಗಟ್ಟಿದರು.

ಕೆಲಕಾಲ ಸಂಚಾರಕ್ಕೆ ತಡೆಯುಂಟಾಗಿದ್ದು, ಕೆಲ ಕಾರ್ಯಕರ್ತರು ರಸ್ತೆಯಲ್ಲೇ ಮಲಗಿ ಪ್ರತಿಭಟನೆ ನಡೆಸಿದರು.

ಪೊಲೀಸರು ಸ್ಥಳಕ್ಕೆ ತೆರಳಿ ಮನವೊಲಿಸಿದ ಬಳಿಕ ಪರಿಸ್ಥಿತಿ ಸಹಜಗೊಂಡಿತು.

### ದಲಿತ ನಾಯಕನಿಗೆ ಅವಮಾನ ಕಾನೂನು ಕ್ರಮಕ್ಕೆ ಆಗ್ರಹ

ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಬಳಿಕ ರಾಮಲೀಲಾ ಮೈದಾನವನ್ನು ಶುದ್ಧೀಕರಿಸಿರುವ ಘಟನೆ ದಲಿತ ಸಮುದಾಯಕ್ಕೆ ಮಾಡಿದ ಅವಮಾನವಾಗಿದೆ ಎಂದು ಕಾಂಗ್ರೆಸ್ ಮುಖಂಡ ಪಟೇಲ್ ಶಿವಪ್ಪ ಆರೋಪಿಸಿದರು. ಘಟನೆಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಜರುಗಿಸಿ, ಖರ್ಗೆ ಅವರಲ್ಲಿ ಕ್ಷಮೆಯಾಚಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

# ಸರ್ಕಾರಿ ಶಾಲೆ ಉಳಿದರಷ್ಟೇ ಬಡ ಮಕ್ಕಳಿಗೆ ಶಿಕ್ಷಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸರ್ಕಾರಿ ಶಾಲೆಗಳು ಉಳಿದು, ಸಮಗ್ರವಾಗಿ ಅಭಿವೃದ್ಧಿಗೊಂಡಾಗ ಮಾತ್ರ ಬಡ ಹಾಗೂ ಮಧ್ಯಮ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲು ಸಾಧ್ಯ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಬಿ.ಎಂ. ರಸ್ತೆಯಲ್ಲಿರುವ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಅಭಿವೃದ್ಧಿ ಸಮಿತಿ (ಎಸ್‌ಡಿಎಂಸಿ) ಹಾಗೂ ಹಳೇ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಪುನರ್ ನಿರ್ಮಿಸಲಾದ ಮೂರು ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲವು ವರ್ಷಗಳಿಂದ ಶಿಥಿಲಾವಸ್ಥೆಯಲ್ಲಿದ್ದ ಶಾಲೆಯ ಮೂರು ಕೊಠಡಿಗಳನ್ನು ಸರ್ಕಾರದ ಅನುದಾನಕ್ಕಾಗಿ ಕಾಯದೆ, ಸಾರ್ವಜನಿಕರು ಹಾಗೂ ಹಳೇ ವಿದ್ಯಾರ್ಥಿಗಳಿಂದ ಸ್ವಯಂಪ್ರೇರಿತವಾಗಿ ಹಣ ಸಂಗ್ರಹಿಸಿ ಪುನರ್‌ನಿರ್ಮಿಸಿರುವುದು ಶ್ಲಾಘನೀಯ. ಶಿಕ್ಷಣದ ಮೇಲಿನ ಇಂತಹ ಬದ್ಧತೆ ಸಮಾಜಕ್ಕೆ ಮಾದರಿಯಾಗಿದ್ದು, ಪ್ರತಿಯೊಂದು ಊರಿನಲ್ಲೂ ಇಂತಹ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.



ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳು ಯಾವುದೇ ರೀತಿಯಲ್ಲೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗಿಂತ ಕಡಿಮೆಯಲ್ಲ. ಅವರಿಗೆ ಉತ್ತಮ ಶಿಕ್ಷಣದ ಜತೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ. ಶಾಲೆಯ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಹಂತ ಹಂತವಾಗಿ ಸರ್ಕಾರದ ಅನುದಾನದ ಮೂಲಕ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ತಮ್ಮ ಸಂಪೂರ್ಣ ಸಹಕಾರ ಇರಲಿದೆ ಎಂದು ಭರವಸೆ ನೀಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಸುಹೀಲ್ ಅಹಮ್ಮದ್ ಮಾತನಾಡಿ, ಹಳೇ ವಿದ್ಯಾರ್ಥಿಗಳು, ದಾನಿಗಳು ಹಾಗೂ ಸಾರ್ವಜನಿಕರ ಸಹಕಾರದಿಂದ ಮೂರು ಕೊಠಡಿಗಳನ್ನು ಪುನರ್ ನಿರ್ಮಿಸಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿಯೂ ಶಾಲೆಯ ಅಭಿವೃದ್ಧಿಗೆ ಎಲ್ಲರ ಸಹಕಾರ ಮುಂದುವರಿಯುವ ವಿಶ್ವಾಸವಿದೆ ಎಂದರು.

ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಅಜರ್, ಪತ್ರಕರ್ತ ಜಮೀಲ್ ಅಹಮ್ಮದ್, ಅಕ್ಮಲ್, ಬಶೀರ್, ಎಸ್‌ಡಿಪಿಐ ತಾಲೂಕು ಅಧ್ಯಕ್ಷ ವಾಜೀದ್ ಪಾಷಾ, ರೆಹಮಾನ್ ಸೇರಿ ಎಸ್‌ಡಿಎಂಸಿ ಸದಸ್ಯರು, ಹಳೇ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ನಡೆಯಿರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ವಿದ್ಯಾರ್ಥಿಗಳಿಗೆ ಪ್ರಾಧ್ಯಾಪಕರುಗಳೇ ಎರಡನೇ ತಂದೆ-ತಾಯಿ ಇದ್ದಂತೆ, ವಿದ್ಯಾರ್ಥಿಗಳು ಮೊಬೈಲ್ ಮತ್ತು ಮಾದಕ ವಸ್ತುಗಳ ವ್ಯಸನಿಗಳಾಗದೆ ಪೋಷಕರು ಮತ್ತು ಪ್ರಾಧ್ಯಾಪಕರ ಮಾರ್ಗದರ್ಶನದಂತೆ ನಡೆದು ಜೀವನವನ್ನು ಸಾರ್ಥಕವಾಗಿಸಿಕೊಳ್ಳುವಂತೆ ಸಂಸದರಾದ ಶ್ರೇಯಸ್ ಎಂ ಪಟೇಲ್ ರವರು ತಿಳಿಸಿದ್ದಾರೆ.

ಹಾಸನ ನಗರದ ಡೈರಿ ವೃತ್ತದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಶಾ ಮುಕ್ತ ಭಾರತ ಅಭಿಯಾನದ 6ನೇ ವರ್ಷದ ವಾರ್ಷಿಕೋತ್ಸವನ್ನು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಹಾಸನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಮಟ್ಟದ ಸಮನ್ವಯ ಸಂಸ್ಥೆ, ಭುವನೇಶ್ವರಿ ಮದ್ಯಪಾನ ಸೇವನಿಗಳ ಸಮಗ್ರ ಪುರ್ನವಸತಿ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ರೆಡ್ ಕ್ರಾಸ್ ಘಟಕ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಸಹಯೋಗದೊಂದಿಗೆ ಇಂದು ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ತಮ್ಮ ಸ್ನೇಹಿತರು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾದ ನೈಜ್ಯ ಘಟನೆಗಳನ್ನು ಉದಾಹರಣೆ ನೀಡಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.




ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ ಅವರು ಮಾತನಾಡಿ ಗುರುಗಳು ಪಾಠ ಮಾಡುವುದರ ಜೊತೆಗೆ, ವಿದ್ಯಾರ್ಥಿಗಳಿಗೆ ಜೀವನಕ್ಕೆ ಬೇಕಾದ ಒಳ್ಳೆಯ ಸಂಸ್ಕಾರಗಳನ್ನು ಕೂಡ ಬೋಧಿಸುತ್ತಿದ್ದಾರೆ. ಪ್ರತಿಯೊಬ್ಬ ಪೋಷಕರಿಗೂ ತಮ್ಮ ಮಕ್ಕಳು ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳಾಗಿ ರೂಪುಗೊಳ್ಳಬೇಕೆಂಬ ಬಯಕೆ ಇರುತ್ತದೆ ಎಂದರು.

ಜೀವನಕ್ಕೆ ಹಾನಿ ಮಾಡುವ ಯಾವುದೇ ಕೆಲಸ-ಕಾರ್ಯಗಳನ್ನು ವಿದ್ಯಾರ್ಥಿಗಳು ಮಾಡಬಾರದು.

ತಂದೆ-ತಾಯಿಯರಿಗೆ ಒಳ್ಳೆಯ ಮಕ್ಕಳಾಗಿ ಬಾಳಬೇಕು ಹಾಗೂ ಎನ್ ಡಿ ಪಿ ಎಸ್ ಆಕ್ಟ್ ಬಗ್ಗೆ ವಿವರಿಸುತ್ತಾ ವಾಣಿಜ್ಯವಾಗಿ ಕಾನೂನಿಗೆ ಬಾಹಿರವಾಗಿರುವ ಮಾದಕ ದ್ರವ್ಯಗಳನ್ನು ಮಾರಾಟ ಮಾಡುವವರಿಗೆ 30 ವರ್ಷಗಳು ಅಥವಾ ಜೀವಾವಧಿ ಶಿಕ್ಷೆಯನ್ನು ನೀಡಬಹುದು ಮತ್ತು ಮಾದಕ ವಸ್ತುಗಳ ಮಾರಾಟ, ಸೇವನೆ, ಕಳ್ಳ ಸಾಗಣಿಕೆ ಮಾಡುವವರಿಗೆ ಕಾನೂನಿನಲ್ಲಿರುವ ಶಿಕ್ಷೆಗಳ ಹಾಗೂ ದಂಡದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಶ್ರೀನಿಧಿ ಅವರು ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಕಷ್ಟಪಟ್ಟು ಮೇಲೆ ಬರಬೇಕು, ವಿದ್ಯಾರ್ಥಿಗಳು ಜೀವನದಲ್ಲಿ ನೋವನ್ನು ಕಷ್ಟಗಳನ್ನು ಅನುಭವಿಸಬೇಕು ಆಗ ಮಾತ್ರ ಭವ್ಯ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯ.

ಜೀವನದಲ್ಲಿ ಎಲ್ಲರಿಗೂ ಬೆಲ್ಲದ ಆಸೆಯೇ ಜಾಸ್ತಿ, ಆದರೆ ಬೇವಿನ ಒಳ್ಳೆಯ ಔಷಧಿ ಗುಣಗಳೂ ಯಾರಿಗೂ ಬೇಡವಾಗಿದೆ. ಹಾಗೆಯೇ ಯುವಕರಿಗೆ ಜೀವನಕ್ಕೆ ಬೇಡವಾದ ಡ್ರಗ್ಸ್, ಮದ್ಯಪಾನ, ಧೂಮಪಾನ ಎಂಬ ದುಶ್ಚಟಗಳಿಗೆ ಮಾರು ಹೋಗದೆ ವಿದ್ಯಾರ್ಥಿಗಳು ಕೆಲಮೊಂದಕ್ಕೆ ಸ್ವಯಂ ನಿಯಂತ್ರಣ ಹಾಕಿಕೊಂಡರೆ ಮಾತ್ರ ಜೀವನವನ್ನು ಶ್ರೇಷ್ಟವಾಗಿಸಿಕೊಳ್ಳಬಹುದು ಎಂದರು.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಗಿರೀಶ್ ಅವರು ಮಾತನಾಡಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುವಾಗ ತಂದೆ-ತಾಯಿಯವರ ಕಷ್ಟಗಳನ್ನು ಮನಸ್ಸಲ್ಲಿ ಇಟ್ಟುಕೊಂಡು ವ್ಯಾಸಂಗ ಮಾಡಿ ಹಾಗೂ ಯಾವುದೇ ಮಾದಕ ವಸ್ತುಗಳಿಗೆ ದಾಸರಾಗದೇ, ತಂದೆ-ತಾಯಿಯರಿಗೆ ದ್ರೋಹ ಮಾಡದಿದ್ದರೇ ಜೀವನವೂ ನಿಮ್ಮನ್ನು ತಾನಾಗಿಯೇ ಉನ್ನತ ಮಟ್ಟಕ್ಕೆ ಕರೆದೊಯ್ಯುತ್ತದೆ ಎಂದರು.

ಭುವನೇಶ್ವರಿ ಮದ್ಯಪಾನ ಸೇವನಿಗಳ ಸಮಗ್ರ ಪುನರ್ವಸತಿ ಕೇಂದ್ರದ ಯೋಜನ ನಿರ್ದೇಶಕರದ ಅಂಜಲಿದೇವಿ ಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು.

# ಶಾಲಾ ಶಿಕ್ಷಕರ ಸಂಘಕ್ಕೆ ದೊರೇಶ್ ನೇಮಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ತಾಲೂಕಿನ ಸಿದ್ದಾಪುರ ಸರ್ಕಾರಿ ಶಾಲೆಯ ಶಿಕ್ಷಕ ಹಾಗೂ ಸರ್ಕಾರಿ ನೌಕರರ ಸಂಘದ ಹಾಲಿ ಖಜಾಂಚಿ ಎಂ.ಎಸ್.ದೊರೇಶ್ ಅವರನ್ನು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ನುಗ್ಲಿ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಚೇತನ್ ಕೊಡಗು ಅವರು ಪ್ರಕಟಣೆ ಹೊರಡಿಸಿ ತಿಳಿಸಿದ್ದಾರೆ. ಶಿಕ್ಷಕರ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಎಂ.ಎಸ್. ದೊರೇಶ್ ಅವರ ಸಂಘಟನಾ ಚಟುವಟಿಕೆ, ಅನುಭವ ಹಾಗೂ ಕಾರ್ಯಕ್ಷಮತೆಯನ್ನು ಪರಿಗಣಿಸಿ ಈ ಜವಾಬ್ದಾರಿ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಇತಿಹಾಸದಲ್ಲಿ ಈ ದಿನ



## ಆಗಸ್ಟ್-19

1839: ಲೂಯಿಸ್ ಡಾಗೆರೆಯವರ ಡಾಗೆರೋಟೈಪ್ ಛಾಯಾಗ್ರಹಣ ಪ್ರಕ್ರಿಯೆಯು ಸಂಪೂರ್ಣ ಕಾರ್ಯ ಸೂಚನೆಗಳೊಂದಿಗೆ ಪ್ಯಾರಿಸ್‌ನಲ್ಲಿ ಫ್ರೆಂಚ್ ಸರ್ಕಾರದ ಉಡುಗೊರೆಯಾಗಿ "ಜಗತ್ತಿಗೆ ಉಚಿತವಾಗಿ" ಪ್ರಕಟವಾಯಿತು.

1942 : ಎರಡನೇ ಮಹಾಯುದ್ಧ: ಫ್ರಾನ್ಸ್‌ನ ಡಿಪ್ಪೆ ಮೇಲೆ ನಡೆದ ದಾಳಿಯಲ್ಲಿ 4,000 ಕ್ಕೂ ಹೆಚ್ಚು ಕೆನಡಿಯನ್ ಮತ್ತು ಬ್ರಿಟಿಷ್ ಸೈನಿಕರು ಕೊಲ್ಲಲ್ಪಟ್ಟರು, ಗಾಯಗೊಂಡರು ಅಥವಾ ಸೆರೆಹಿಡಿಯಲ್ಪಟ್ಟರು.

1988 , ಇರಾನ್ ಮತ್ತು ಇರಾಕ್ ತಮ್ಮ ಎಂಟು ವರ್ಷಗಳ ಯುದ್ಧದಲ್ಲಿ ರಾತ್ರಿ 11 ಗಂಟೆಗೆ ಇಆಖ ಕದನ ವಿರಾಮವನ್ನು ಪ್ರಾರಂಭಿಸಿದವು.

1991 ರ ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಸಂಪ್ರದಾಯವಾದಿ ಸದಸ್ಯರು ಕ್ಷಿಪ್ರಕ್ರಾಂತಿಯಲ್ಲಿ ಮಿಖಾಯಿಲ್ ಗೋರ್ಬಚೇವ್ ಅವರನ್ನು ಪದಚ್ಯುತಗೊಳಿಸಲು ಪ್ರಯತ್ನಿಸಿದರು [1]

2003 ರಲ್ಲಿ ಇರಾಕ್ ಆಕ್ರಮಣದ ಸಮಯದಲ್ಲಿ ಮರಳು ಬಿರುಗಾಳಿಯಲ್ಲಿ ಅಮೆರಿಕದ ಪಡೆಗಳು.ಇರಾಕ್ ಆಕ್ರಮಣ

2010 ರ ಆಪರೇಷನ್ ಇರಾಕಿ ಫ್ರೀಡಂ ಅಂತ್ಯಗೊಂಡಿತು, ಯುನೈಟೆಡ್ ಸ್ಟೇಟ್ಸ್ ಬ್ರಿಗೇಡ್ ಯುದ್ಧ ತಂಡಗಳ ಕೊನೆಯ ತಂಡವು ಕುವೈತ್ ಗಡಿಯನ್ನು ದಾಟಿತು

# ಅದೊಂದು ಬೇರೆಯದೇ ಅನುಭೂತಿ....8

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-50**

ಕಣ್ಣು ಹಾಯಿಸಿದಷ್ಟು ದೂರಕ್ಕೂ ಹಸಿರಿನ ಹಾಸಿನಂತೆ ಕಾಣುತಿದ್ದ ಆ ಬೆಟ್ಟಗಳ ಸಾಲು ಆ ಮಕ್ಕಳ ಸೈನ್ಯವನ್ನು ಮಂತ್ರಮುಗ್ಧಗೊಳಿಸಿತು. ಈ ಜಗತ್ತಿನಲಿ ಇದಕ್ಕಿಂತಲೂ ಅಮೂಲ್ಯವಾದುದು ಮತ್ತೇನೂ ಇರಲಾರದೆಂದೆನಿಸಿತು. ತಾವು ಎಲ್ಲಿಂದ ಬಂದಿದ್ದೇವೆ, ಎಲ್ಲಿದ್ದೇವೆ, ಎತ್ತ ಹೋಗಲಿಕ್ಕಿದೆ ಎಂಬುದನ್ನು ಸಹಾ ಮರೆಸುವಂತೆ ಎತ್ತ ನೋಡಿದರತ್ತ ಇಡೀ ಜಗತ್ತಿನ ಸೊಬಗೇ ಇಲ್ಲಿ ಬಂದು ಸುರಿದು ಬಿದ್ದಿದೆಯೋ ಎಂಬಂತೆ ಎಲ್ಲರ ಬಾಯಿಯನ್ನು ಕಟ್ಟಿ ಹಾಕಿತು.

ಮಧ್ಯಾಹ್ನದ ಊಟ ಮುಗಿಸಿದ ಶಾಲಾ ತಂಡ ಆ ದಿನ ಮಧ್ಯಾಹ್ನವನ್ನು ಯಾವುದೇ ಪ್ರಯಾಣ ಮಾಡದೇ ಅದೇ ಬಳ್ಳಾಲರಾಯನದುರ್ಗ ಪ್ರದೇಶದಲ್ಲೇ ಜಲಮೂಲಗಳು, ಔಷಧೀಯ ಸಸ್ಯಗಳು, ಆರ್ಕಿಡ್ ಮುಂತಾದುವುಗಳ ಕುರಿತು ಮಾಹಿತಿ ಕಲೆಹಾಕುವುದೆಂದು ನಿರ್ಧರಿಸಿತು. ಎರಡು ದಿನಗಳ ನಿರಂತರ ಪ್ರಯಾಣದಿಂದ ಆಯಾಸಗೊಂಡಿದ್ದ ಅನೇಕರು ಆ ಹಸುರ ರಾಶಿಯ ಮಡಿಲಲ್ಲಿ ತಂಗಾಳಿಯ ಅಡಿಯಲ್ಲಿ ಜಗತ್ತಿನೆಲ್ಲ ಐಶ್ವರ್ಯವೆಲ್ಲಮೂ ತಮಗೇ ದಕ್ಕಿದೆ ಎಂಬ ತೃಪ್ತಿಯಿಂದ ಬದುಕಿನ ಈವರೆಗಿನ ಆಯಾಸವೆಲ್ಲವೂ ಪರಿಹಾರವಾಯ್ತೆಂಬ ನೆಮ್ಮದಿಯಿಂದ ನಿದಿರಾದೇವಿಯ ಸಮ್ಮೋಹನಕ್ಕೊಳಗಾಗಿ ಸಂಜೆ ಐದರವರೆಗೂ ವಿಶ್ರಾಂತಿ ಪಡೆದರು.

ಮೋಹನ್ ರಾಜ್, ಗಿರೀಶ್ಮೇಷ್ಪು ಜತೆಗೊಂದಷ್ಟು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕಾಡಿನಲ್ಲಿ ಇರುವ ಈ ಸಮಯದ ಸುಸಂದರ್ಭವನ್ನು ಬಳಸಿಕೊಳ್ಳದೇ ಬಿಡಬಾರದೆಂದೆಣಿಸಿ ಅಲ್ಲೇ ಸಮೀಪದಲ್ಲಿ ಸಳಸಳನೆ ಹರಿಯುತಿದ್ದ ಸರುಕಲಿನ ಹಾದಿಯಗುಂಟ ಆ ನೀರಿನ ಹರಿವಿನ ಮೂಲವನ್ನು ಹುಡುಕಲೇಬೇಕೆಂಬ ಹಂಬಲದಿಂದ ಆ ಕಡಿದಾದ ಹೆಬ್ಬಂಡೆಗಳನ್ನು ಸುತ್ತಿ ಬಳಸಿ ಉತ್ಸಾಹದಿಂದಲೇ ಮೈಯೆಲ್ಲ ಕಣ್ಣಾಗಿ ನಡೆಯುತಿದ್ದರು. ಈ ಹಿಂದೆ ನೋಡಿರದಿದ್ದ ಸಸ್ಯ ಪ್ರಭೇಧಗಳು, ಕಪ್ಪೆಗಳು, ಮೀನುಗಳು, ಓತಿಕ್ಯಾತಗಳು ಮುಂತಾದುವನ್ನು ನೋಡುತ್ತಾ ಅಚ್ಚರಿಗೊಳ್ಳುತ್ತಾ, ತಮ್ಮ ಗುರುಗಳ ಬಳಿ ಅವುಗಳ ವಿಚಾರವಾಗಿ ಕೇಳಿ ತಿಳಿದುಕೊಳ್ಳುತ್ತಿದ್ದರು.



ಇದ್ದಕ್ಕಿದ್ದಂತೆ ಯಾಕೋ ಮೋಹನ್ ರಾಜ್‌ರವರಿಗೆ ತಮ್ಮೊಡನೆ ಹೊರಟ ವಿದ್ಯಾರ್ಥಿಗಳ ಸಂಖ್ಯೆಗೂ, ಈಗ ತಮ್ಮೊಡನೆ ಇರುವವರ ಸಂಖ್ಯೆಗೂ ವ್ಯತ್ಯಾಸವಾಗಿರುವುದು ಗಮನಕ್ಕೆ ಬಂತು. ಬೇಸ್ ಕ್ಯಾಂಪಿನಿಂದ ಹೊರಟಾಗ ಬಂದಿದ್ದ ಹುಡುಗಿಯರು ಆರು ಜನ, ಹುಡುಗರು ಐದು ಜನ.

ಈಗ ತಮ್ಮೊಡನಿರುವುದು ಮೂವರು ಹುಡುಗರು, ಮೂವರು ಹುಡುಗಿಯರು ಮಾತ್ರ!!! ಎಲ್ಹೋದರು ಉಳಿದ ಐದು ಜನಾ!!?? ಗಾಬರಿಗಿಟ್ಟುಕೊಂಡಿತು ಈ ಇಬ್ಬರು ಶಿಕ್ಷಕರುಗಳಿಗೆ. ತಮ್ಮೊಡನಿದ್ದ ವಿದ್ಯಾರ್ಥಿಗಳಲ್ಲಿ ವಿಚಾರಿಸಿದರೆ, ಸರ್, ನಮ್ಮ ಜೊತೆಯೆ ಈವರೆಗೂ ಇದ್ದರು. ನೀವು ಮುಂದೆಮುಂದೆ ಹೋಗುತಿದ್ದುದನ್ನು ನೋಡಿಕೊಂಡು ನಾವು ನಿಮ್ಮನ್ನೇ ಹಿಂಬಾಲಿಸಿದೆವು. ಈಗ ನೋಡಿದರೆ, ಆ ಐದು ಜನರೂ ಇಲ್ಲ. ಎಲ್ಲರ ಮುಖ ಪೆಚ್ಚಾಗಿತ್ತು. ಏನೋ ಎಂತೋ ಎಂದು ಗಲಿಬಿಲಿಗೊಂಡಿದ್ದರು. ಹತ್ತನೇ ತರಗತಿಯ ರಶ್ಮಿಯಂತೂ ಅಳಲೇ ಶುರೂ ಮಾಡಿದಳು. ಅವಳೊಡನೆ ಇದ್ದ ನಾಗಲಕ್ಷ್ಮಿ ''ಅಲ್ಲೊಂದು ಕಡೆ ಯಾರೋ ಕಾಡಿನ ಹುಲ್ಲನ್ನು ಕೋಯ್ದು ಒಂದೆಡೆ ರಾಶಿ ಮಾಡಿಟ್ಟಂತೆ ಇತ್ತು. ಸುತ್ತಲೂ ಜನವಸತಿಯೇ ಇಲ್ಲದೆಡೆ ಹುಲ್ಲು ಕೂಯ್ದು ಈ ಕಾಡಿ ನಡುವೆ ರಾಶಿಯನ್ನು ಯಾರಾದರೂ ಯಾಕಾದರೂ ಮಾಡಿಟ್ಟಿರ್ತಾರೆ? ಅದೇನಂತ ನೋಡಣ ಬನ್ನಿ ಅಂತ ಮುಕುಂದ ನಮ್ಮನ್ನೂ ಕರೆದ.

ನಾವು ಮೋಹನ್ರಾಜ್ ಸರ್ ಬೈತಾರೆ, ಅಂತ ಸೀದಾ ಬಂದ್ವಿ'' ಎಂದಳು. ಇದನ್ನು ಕೇಳಿಸಿಕೊಂಡ ಗಿರೀಶ್ಮೇಷ್ಪು, ''ಅಯ್ಯೋ, ಹೌದಾ, ಬನ್ನಿ, ಬನ್ನಿ, ಏನದ್ರೂ ಅನಾಹುತವಾಗೋದ್ರೊಳಗೆ ಅವರನ್ನಲ್ಲಿಂದ ದೂರಕ್ಕೆ ಕರೆತರಬೇಕು'' ಎಂದವರೇ, ತಮ್ಮ ಕೈಯ್ಯಲ್ಲಿದ್ದ ಆರಡಿ ಕೋಲಿನೊಂದಿಗೆ ಗಾಬರಿಯಿಂದ ಆ ಐವರು ಇರಬಹುದಾದ ದಿಕ್ಕಿಗೆ ಏದುಸುರಿನಿಂದ ಓಡತೊಡಗಿದರು. ಅವರಲ್ಲೊಬ್ಬನ ಹೆಸರಾದ ಮಂಜುನಾಥನ ಹೆಸರನ್ನು ಜೋರಾಗಿ ಕೂಗುತ್ತ ''ಅಲ್ಲಿಂದ ಬನ್ನಿ ಬನ್ನಿ, ಬೇಗ ಬನ್ನಿ. ಮಂಜೂ, ಒಂದು ಕ್ಷಣವೂ ಅಲ್ಲಿರಬೇಡಿ, ಬೇಗ ಬನ್ನಿ. ವಿದ್ಯಾ, ಸೀಮಾ, ಮುಕುಂದಾ, ಮಹೇಶಾ'' ಮೇಷ್ಟ್ರು ಹಿಂದೆಯೇ ಮೋಹನ್ರಾಜ್ ಹಾಗೂ ಇನ್ನುಳಿದ ಮಕ್ಕಳೂ ಸಹಾ ಗಿರೀಶ್ಮೇಷ್ಪ್ರನ್ನ ಹಿಂಬಾಲಿಸಿ ಓಡತೊಡಗಿದರು.

ಒಂದೆರಡು ಫರ್ಲಾಂಗ್ ಓಡಿದ ನಂತರ ಒಂದು ಬಿದಿರಿನ ಹಿಂಡಲಿನ ಕೆಳಗೆ ನಾಲ್ಕಡಿಗೂ ಎತ್ತರವಾಗಿ ತೊಪ್ಪೆ ಬಿದ್ದಿದ್ದ, ಆ ಕಾಡಿನಲ್ಲಿ ಯಥೇಚ್ಛವಾಗಿ ಬೆಳೆದಿದ್ದ ಆನೆಹುಲ್ಲಿನ ರಾಶಿಯನ್ನು ಮಹೇಶ ಮತ್ತು ಮುಕುಂದ ಮಾರುದ್ದದ ಕೋಲಿನಿಂದ ಜಿಬುಕುತಿದ್ದರು. ಗಂಟಲು ಹರಿದುಹೋಗುವಂತೆ ಕೂಗುತ್ತಿದ್ದರೂ ಅದರ ಕಡೆಗೆ ಒಂದಿನಿತೂ ಗಮನವೀಯದೆ ತಮ್ಮದೇ ಲೋಕದಲ್ಲಿ ವಿಹರಿಸುತಿದ್ದ ಆ ಐವರಿಗೂ ತಾವುಗಳು ಅತ್ಯಂತ ಅಪಾಯದ ಸನ್ನಿವೇಶದಲ್ಲಿರುವುದರ ಅರಿವೇ ಇರಲಿಲ್ಲ.

ವಿದ್ಯಾ ಮತ್ತು ಸೀಮಾ ಇಬ್ಬರೂ ಆ ಹುಲ್ಲಿನ ರಾಶಿಯನ್ನು ಆ ಕಾಡಿನಲ್ಲಿ ಯಾರು, ಯಾಕಾಗಿ ಮಾಡಿರಬಹುದೆಂದು ಮಂಜುನಾಥನೊಂದಿಗೆ ಆರ್ಗ್ಯುಮೆಂಟ್ ನಡೆಸುತಿದ್ದರು. ಗಿರೀಶ್ಮೇಷ್ಪು ಹೋದಹೋದವರೇ ಮಹೇಶ ಮತ್ತು ಮುಕುಂದನ ಮುಕುಳಿಯ ಕೆಳಗಿನ ತೊಡೆಯ ಹಿಂಭಾಗದ ಮೆತ್ತನೆಯ ಮಾಂಸದ ತುಣುಕುಗಳಿಗೆ ರಪ್ಪರಪ್ಪನೆ ಪ್ಯಾಂಟು ಹರಿದುಹೋಗುವಂತೆ ಇಕ್ಕರಿಸಿದರು.

ಅದನ್ನು ನೋಡಿದ ಮಂಜ ಎತ್ತಕಡೆ ಮಾಯವಾಗಿಹೋದ ಅಂತನೇ ಗೊತ್ತಾಗಲಿಲ್ಲ. ಈ ಹುಡುಗಿಯರಿಬ್ಬರೂ ತಮಗೆಲ್ಲಿಗೆ ಹೊಡೆತ ಬೀಳಬಹುದೆಂದು ಅಪ್ರತಿಭರಾಗಿ ಬೆಪ್ಪಿಯರಂತೆ ದಯನೀಯರಾಗಿ ಮೊಹನ್ರಾಜ್ ಮಾಸ್ತರರತ್ತ ದೈನ್ಯತೆಯಿಂದ ನೋಡತೊಡಗಿದರು.

ಓಡಿ ಬಂದ ಸುಸ್ತು, ಕೂಗಿ, ಕೂಗಿ ಆಗಿದ್ದ ಆಯಾಸ, ಕೂಗಿದಾಗ ಅದಕ್ಕೆ ಪ್ರತಿಕ್ರಿಯಿಸದಿದ್ದಕ್ಕೆ ಬಂದಿದ್ದ ಸಿಟ್ಟು ಇವೆಲ್ಲದ್ದರಿಂದ ಥರಥರನೆ ನಡುಗುತ್ತಿದ್ದ ಗಿರೀಶ್ಮೇಷ್ಟ್ರು ಒಂದೇ ಉಸಿರಿಗೆ ''ಓಡಿ ಇಲ್ಲಿಂದ, ಬೇಗ, ಬೇಗ'' ಎಂದು ಆ ಹುಡುಗಿಯರ ಕಡೆ ದುರದುರನೆ ನೋಡಿ ಅಬ್ಬರಿಸಿದರು. ಅಂತೂ ಇಂತೂ ಆ ಹುಲ್ಲಿನ ರಾಶಿಯಿಂದ ಕನಿಷ್ಠ ಎರಡು ಫರ್ಲಾಂಗ್ ದೂರದವರೆಗೆ ಓಡಿ, ನಂತರ ಬೇಸ್ ಕ್ಯಾಂಪ್ ತಲುಪಿದ ಈ ಹದಿಮೂರು ಜನರ ತಂಡ, ಸುಧಾರಿಸಿಕೊಳ್ಳಲು ಕಡಿಮೆ ಎಂದರೂ ಒಂದು ಗಂಟೆ ತೆಗೆದುಕೊಂಡಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248